Sri M. C. NARASIMHAN.—Sir, there is a controversy regarding the definition of plantation in the definition. It is restricted. They have not taken note of the other crops that are grown within the plantation area. In the Kerala Act, the definition of plantation is slightly wider and it partakes the Central Plantation Labour Act and it includes also the area within the bounds of plantation whatever agricultural produce is grown or whatever forests there are, is not taken into account for the purpose of ceiling. May I know your feeling in regard ?

Sri KADIDAL MANJAPPA.—The suggestion was that plantation owners should be left with some extra land for ancillary purposes. The choice was whether they should have one ceiling area of land required for ancillary pruposes. We have chosen to give one ceiling area in addition to the plantation exempted from ceiling.

Mr. DEPUTY SPEAKER.—The question is :

"That the Mysore Land Reforms Bill 1961, as reported by Joint Select Committee be taken into Consideration."

The motion was adopted.

5-30 P.M.

HALF AN HOUR DISCUSSION *Re:* SUPPLY OF ELECTRICITY TO RESIDENTS OF RON, DHARWAR DISTRICT.

†ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮೀ, ಕಳೆದ ಏಪ್ರಿಲ್ ತಿಂಗಳಿನಲ್ಲಿ ನರಕಾರದವರು ರೋಣ್ ತಾಲ್ಲೂಕಿನ ೨ ಎಮ್ಮೆಚ್ಕ್ಕೆ ಕೆಲಸವನ್ನು ಪೂರೈಸಲು ಒಂಬತ್ತು ತಿಂಗಳು ಬೇಕಾಗುತ್ತದೆ ಎಂದು ಹೇಳಿದ್ದರು. ರೋಣ್ ತಾಲ್ಲೂಕಿನ ಮುಖ್ಯ ಗ್ರಾಮಗಳಾದ ನವಲಿ ಯಾವಗಲ್, ಸೂಳೆ ಅಲೂರು, ಬೆಳವಣಕಿ ಇವ್ಗೆಲ್ಲ ಶಕ್ತಿವ್ಯಪ್ತಿ ಬೇಗನೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿತ್ತು, ಏಕೆಂದರೆ ಇಲ್ಲಿಯವರು ಫಾರಂಗಳನ್ನೆಲ್ಲಾ ಕೊಟ್ಟಿರುವುದರಿಂದ ಬೇಗನೆ ವಿಚಾರ ಮಾಡುತ್ತೇವೆಂದು ಹೇಳಿದ್ದರು. ಇದರ ಸಲುವಾಗಿ ಆಗಿನ ಪಿ.ಡಬ್ಲ್ಯು.ಡಿ. ಮಿನಿಸ್ಟರಾಗಿದ್ದ ಶ್ರೀವಾನ್ ಚೆನ್ನಬಸಪ್ಪನವರು ಹೊಳೆ ಆಲೂರು ಗ್ರಾಮಕ್ಕೆ ಭೇಟಿ ಕೊಟ್ಟಾಗ ಆದಷ್ಟು ಬೇಗನೆ ಹೊಳೆ ಆಲೂರು ಗ್ರಾಮಕ್ಕೆ ವಿದ್ಯುಚ್ಛಕ್ತಿಯನ್ನು ಪೂರೈಸಿ ಕೊಡುತ್ತೇವೆಂದು ವಚನ ಕೊಟ್ಟಿದ್ದರು. ಆ ಪ್ರಕಾರ ಅವೇ ಪ್ಲಾನು ಮತ್ತು ಎಸ್ಟಿಮೇಟುಗಳು ಮಾಡಿದ್ದು ಇನ್ನೂ ಚೀಫ್ ಎಲೆಕ್ಟ್ರಿಕರ್ ಆಫೀಸರ್‌ವರೆಗೆ ಬಂದಿಲ್ಲ. ನಿನ್ನೆಯ ದಿನ ಇವರ ಬಗ್ಗೆ ಪ್ಲಾನು ಎಸ್ಟಿಮೇಟು ಬಂದಮೇಲೆ ಏನೋ ಎಂದು ಚೀಫ್ ಎಲೆಕ್ಟ್ರಿಕರ್ ಆಫೀಸರ್‌ರವರ ಕಡೆಗೆ ಹೋಗಿ ನೋಡಿದ್ದರಲ್ಲಿ ಇನ್ನೂ ಪ್ಲಾನು ಸಾಂಕ್ಷನ್ನು ಆದ ಹಾಗೆ ಕಾಣಲಿಲ್ಲ ಮತ್ತು ಇಲ್ಲಿನ ಕೆಲಸಗಳು ಬಹಳ ಮಂದಗತಿಯಿಂದ ನಡೆಯುತ್ತಿರುವುದರಿಂದ ಇನ್ನೂ ಒಂದು ಒಂದೂವರೆ ವರ್ಷಗಳಾದರೂ ಈ ಕೆಲಸಗಳು ಪೂರೈಸುವ ಹಾಗೆ ಕಾಣುವುದಿಲ್ಲ. ನರಕಾರದವರು ಕಳೆದ ಏಪ್ರಿಲ್‌ನಲ್ಲಿ 9 ತಿಂಗಳು ಕಾಲದಲ್ಲಿ ಪೂರೈಕೆಯಾಗುವುದು ಎಂದು ಹೇಳಿದ್ದರೂ ಈಗಾಗಲೇ ನಾಲ್ಕೈದು ತಿಂಗಳು ಕಳೆದರು ಇವರ ಬಗ್ಗೆ ಪ್ಲಾನು, ಎಸ್ಟಿಮೇಟು ಏಕೆ ಪೂರೈಕೆ ಮಾಡಬಾರದು ಎಂದು ನಾನು ಕೇಳುತ್ತೇನೆ. ಇಲ್ಲಿ ಕೆಲಸಗಳು ಪೂರೈಕೆಯಾಗದಿರಲು ಮುಖ್ಯವಾದ ಕೊರತೆ ಎಂದರೆ ಅದಕ್ಕೆ ಬೇಕಾದ್ದ ಉಪಕರಣಗಳು ಸಿಗದೇ ಇರುವುದು ಇವಕ್ಕೆ ಕಾರಣವೆಂದು ಅಲ್ಲಿನ ಎಕ್ಸಿಕ್ಯೂಟೀವ್ ಆಫೀಸರುಗಳು

ಹೇಳುತ್ತಾರೆ. ಈ ರೀತಿಯಾಗಿ ಬೇಕಾಗುವ ಮೆಜೀರಿಯಲ್ಲುಗಳನ್ನು ಸರ್ಕಾರದವರು ಬೋರ್ಡಿಗೆ ಸಕಾಲದಲ್ಲಿ ಒದಗಿಸಿ ಕೊಡಬೇಕು. ಹೀಗೆ ಮೆಜೀರಿಯಲ್ಲುಗಳನ್ನು ಒದಗಿಸಿಕೊಟ್ಟರೆ ಬೋರ್ಡಿನವರು ಕೆಲಸ ಮಾಡಲಿಕ್ಕೆ ಸಾಧ್ಯವಿದೆ. ಬೋರ್ಡಿನ ಅಧಿಕಾರಿಗಳು ಈ ಬಗ್ಗೆ ಸಕಾಲದಲ್ಲಿ ಎಚ್ಚರಿಸಿಕೊಂಡಾಗಿ ಸಾಧ್ಯವಾದಷ್ಟು ಮಟ್ಟಿಗೂ ಕೆಲಸವನ್ನು ಪೂರೈಕೆ ಮಾಡಿಕೊಳ್ಳಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಸರಕಾರ ಯೋಚನೆ ಮಾಡಬೇಕು ರೋಣ್ ತಾಲ್ಲೂಕಿನೊಳಗೆ ಈಗ ಸುಮಾರು 120 ಪಂಪು ಸೆಟ್ಟುಗಳು ಬೇಕೆಂದು ಕೇಳಿವೆ. ವ್ಯವಸಾಯಕ್ಕಾಗಿ ಇದನ್ನು ಉಪಯೋಗಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ವಿದ್ಯುಚ್ಛಕ್ತಿಯನ್ನೂ ಉಪಯೋಗಿಸಿಕೊಂಡು ಐದು ಲಕ್ಷ ರೂಪಾಯಿಗಳ ಪೆಟ್ರೋಲಿನ ಬಾಬಿಗಳನ್ನು ಮಾಡಿಸಿಕೊಡಬೇಕಾಗಿತ್ತು ಎಂದು ಹಿಂದೆ ಸರಕಾರದವರು ಹೇಳಿದ್ದರು. ಹಿಂದೆ ನಾವು ಮುಂಬಯಿ ರಾಜ್ಯದಲ್ಲಿದ್ದಾಗ ಇಲ್ಲಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕು ಮತ್ತು ಇದಕ್ಕೆ ಪ್ಲಾನು ಆಗಬೇಕು ಎಂದು ಹೇಳಿದ್ದರು ಆಗ ಹೊಳೆ ಆಲೂರು ಮತ್ತು ಗಜೇಂದ್ರಗಡ ಇಲ್ಲಿಗೆ ಡೀಸಲ್ ಆಯಿಲ್ ಎಂಜಿನ್ನುಗಳನ್ನು ಹಾಕಬೇಕು ಎಂದಿತ್ತು. ಅದಕ್ಕೆ ಪ್ಲಾನು ಆಗಲಿಲ್ಲ. ಇಲ್ಲಿ ಬಹಳ ದೊಡ್ಡ ವ್ಯಾಪಾರ ಕೇಂದ್ರ ಮತ್ತು ರೋಣ್ ಕೂಡ ಒಂದು ಮುಖ್ಯವಾದ ವ್ಯಾಪಾರ ಕೇಂದ್ರ. ಇದೂ ಅಲ್ಲದೆ ಬಾಗಲಕೋಟೆ ಮತ್ತು ಗದಗ್ ಇವೂ ದೊಡ್ಡ ವ್ಯಾಪಾರ ಕೇಂದ್ರಗಳು. ಇಂತಹ ಕಡೆಗಳಲ್ಲಿ ಇನ್ನೂ ವಿದ್ಯುಚ್ಛಕ್ತಿಯ ಕೆಲಸಗಳು ಆಗಲಿಲ್ಲ. ಸರಕಾರವನ್ನು ಈ ಕೆಲಸಗಳಿಗಾಗಿ ಸ್ಯಾಂಕ್ಷನ್ನು ಕೊಟ್ಟಿದ್ದರೂ ಇದನ್ನೂ ಬೇಗ ಮುಗಿಸಲು ಶಕ್ಯವಿದ್ದಷ್ಟು ಮಾಡಬೇಕು. ಹೊಳೆ ಆಲೂರಿಗೆ ಆದಷ್ಟು ಬೇಗ ಮುಂಜೂರು ಆಗಬೇಕು. ಯಾವ ಯಾವ ಹಳ್ಳಿಗಳಲ್ಲಿ ಪ್ಲಾನು, ಎಸ್ಟಿಮೇಟುಗಳು ತಯಾರಾಗಲಲ್ಲಪ್ಪೋ ಅಲ್ಲಿಗೆ ಬೇಗನೆ ಮಾಡಲು ಯತ್ನ ಮಾಡಬೇಕು. ಈ ಬಗ್ಗೆ ಸರಕಾರ ಸಮರ್ಪಕವಾದ ಉತ್ತರ ಕೊಡಬೇಕು ಮತ್ತು ಆ ರೀತಿ ಹೇಳುತ್ತಾರೆಂದು ನಂಬುತ್ತೇನೆ. ಇವೊತ್ತು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿರುವವರು ನಮ್ಮ ಭಾಗದಲ್ಲಿ ಅಡ್ಡಾಡಿದರೆ ಮತ್ತು ನಮ್ಮ ಭಾಗದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿಕೊಂಡಿದ್ದಾರೆ. ಮತ್ತು ಸಹಾನುಭೂತಿಯುಳ್ಳವರು, ವ್ಯವಸಾಯಗಾರರ ಮನೆತನದಿಂದ ಬಂದವರು. ಈ ದೃಷ್ಟಿಯಿಂದ ಅವರು ಈ ಕಾರ್ಯವನ್ನು ಮಾಡಲು ಮನಸ್ಸು ಮಾಡಿದರೆ ಇದೇನು ಅಸಾಧ್ಯವಲ್ಲ. ಅವರು ಸ್ವಲ್ಪ ಮನಸ್ಸು ಮಾಡಿದರೆ ಈ ಕೆಲಸಗಳು ಬೇಗನೆ ಆದೀತು. ಅವರು ಹಾಗೆ ಮನಸ್ಸು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಎಚ್. ಕೆ. ವೀರಣ್ಣಗಾಡ (ದೇವೋಕೋಪಯೋಗಿ ಶಾಖೆಯ ಮಂತ್ರಿಗಳು).— ಸ್ವಾಮಿ, ಶ್ರೀಮಾನ್ ದೊಡ್ಡಮೇಟಿಯವರು ಇಲ್ಲಿ ಅರ್ಧ ಗಂಟೆಯ ಕಾಲ ಚರ್ಚೆಗೆ ಅವಕಾಶ ಮಾಡಿಕೊಂಡಿರುವ ಪ್ರಶ್ನೆಯ ವಿಚಾರದಲ್ಲಿ ನಾನು ಹೇಳಬೇಕಾದ ಅನೇಕ ಅಂಶಗಳನ್ನು ಅವರೇ ಹೇಳಿಬಿಟ್ಟಿದ್ದಾರೆ. ಅವರ ಉದ್ದೇಶವೇನು ಎಂದರೆ ಕೆಲಸವನ್ನು ಬೇಗನೆ ಮಾಡಿಲ್ಲ ಎಂದು. ಅದನ್ನು ಮಾಡುತ್ತೇವೆ. ಅದರಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ, ಅದುದರಿಂದ ಚರ್ಚೆಗೆ ಅವಕಾಶ ಇಲ್ಲ. ಅವರಿಗೆ ಹಿಂದೆ ಉತ್ತರ ಕೊಟ್ಟಾಗ ಒಂಬತ್ತು ತಿಂಗಳೊಳಗೆ ಕೆಲಸವನ್ನು ಪೂರೈಸಿ ಮುಗಿಸುತ್ತೇವೆಂದು ಹೇಳಲಾಗಿತ್ತು. ಈಗ ಶೇಕಡ ಐವತ್ತು ಭಾಗದ ಕೆಲಸ ಮಾಡಿ ಮುಗಿಸಿದ್ದಾರೆ. ಇನ್ನೂ ನಾಲ್ಕೈದು ತಿಂಗಳುಗಳ ಕಾರ್ಯಾವಕಾಶವಿದೆ. ಈಗ ಹೇಳಬೇಕಾದರೆ ಶೇಕಡ ಹೆಂಬತ್ತು ಭಾಗದಷ್ಟು ಕೆಲಸವಾಗಿದೆ. ಇನ್ನು ಬಾಕಿಯಾಗಿರುವ ಶೇಕಡ ಹತ್ತರಷ್ಟು ಕೆಲಸ ಇನ್ನುಳಿದಿರುವ ನಾಲ್ಕೈದು ತಿಂಗಳಲ್ಲಿ ಈ ಕೆಲಸಗಳು ಆಗುತ್ತವೆ. ಇನ್ನೂ ಹೇಳಬೇಕಾದರೆ ರೋಣದಲ್ಲಿ ಇಷ್ಟರಲ್ಲೇ ವಿದ್ಯುಚ್ಛಕ್ತಿಯ ಕೊಡುವಿಕೆಯ "Switch on Ceremony" ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಇನ್ನು ಕೆಲವು ಗ್ರಾಮಗಳಿಗೆ 33 ಕೆ.ವಿ. ಲೈನನ್ನು ಹಾಕಿಸಬೇಕಾಗಿದೆ. ಅದಕ್ಕಾಗಿ ಬೇಕಾಗಿರುವ ಸಾಮಾನುಗಳು, ತಂತಿ, ಕಂಬಗಳು ಸಾಕಷ್ಟು ಸರಬರಾಜು ಆಗುತ್ತಿಲ್ಲ. ಆದರೂ ನಾವು ಅವು ಸಿಕ್ಕುವವರೆಗೂ ಕಾಯುವ ಹಾಗಿಲ್ಲ. 11 ಕೆ.ವಿ. ಲೈನ್ ಆದರೂ ಹಾಕಿ ತಕ್ಷಣ ಈ ಕಾರ್ಯವನ್ನು ಮುಗಿಸಿ ಮುಂದೆ 33 ಕೆ.ವಿ. ಲೈನುಗಳಿಗೆ ಅದನ್ನು

(ಶ್ರೀ ಹೆಚ್. ಕೆ. ವೀರಣ್ಣಗೌಡ)

ಪರಿವರ್ತನೆ ಮಾಡಿಕೊಳ್ಳುತ್ತೇವೆ. ಆದ್ದರಿಂದ ಇದು ನಿಧಾನವಾಗುವುದಕ್ಕೆ ಅವಕಾಶವಿಲ್ಲವೆಂದು ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಇನ್ನು ರೋಣ್ ತಾಲ್ಲೂಕಿನ ಮುಖ್ಯ ಗ್ರಾಮಗಳಾದ ಹೊಳೆ ಆಲೂರು ಬೆಳವಣಿಕಿ, ಸವದಿ ಯಾವಗಲ್, ಮಲಾಪುರ, ಇತ್ಯಾದಿ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಎಸ್ಟಿಮೇಟನ್ನು ಹೂಬ್ಲಯಲ್ಲರತಕ್ಕ ಸೂಪರಿಂಟೆಂಡಿಂಗ್ ಇಂಜಿನಿಯರ್ ವಿಮರ್ಶೆ ಮಾಡುವುದಕ್ಕಾಗಿ ಕಳುಹಿಸಲಾಗಿದೆ. ಅವರು ಅದನ್ನು ಈಗಾಗಲೇ ವಿಮರ್ಶೆ ಮಾಡುತ್ತಿದ್ದಾರೆ. ಅವರು ಅದನ್ನು ಮಂಜೂರು ಮಾಡಿದ ಕೂಡಲೇ ಈ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರವನ್ನು ಸರ್ಕಾರದವರೂ ಸಹ ಈಗಾಗಲೇ ವಿಮರ್ಶೆ ಮಾಡುತ್ತಿದ್ದಾರೆ. ಇನ್ನು ಕೆಲವು ಹಳ್ಳಿಗಳಿಗೆ "ರೋಡ್ ಸರ್ವೆ ಫಾರ್ಮ್" ಗಳನ್ನು ಈಗಾಗಲೇ ಭರ್ತಿ ಮಾಡಲಾಗಿದೆ. ಆ ಕೆಲಸವೂ ಪೂರ್ತಿಯಾಗುತ್ತದೆ. ಆ ಬಗ್ಗೆ ಎಸ್ಟಿಮೇಟನ್ನು ಸಹ ತಯಾರು ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಮಾನ್ಯ ಸದಸ್ಯರ ಆಶ್ರಯವನ್ನು ಗಮನಕ್ಕೆ ತೆಗೆದುಕೊಂಡು ಅವರ ಆಸೆಯನ್ನು ಶೀಘ್ರದಲ್ಲಿಯೇ ನೆರವೇರಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಸರ್ಕಾರದವರು ಮಾಡುತ್ತಿದ್ದಾರೆಂದು ನಾನು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

Mr. DEPUTY SPEAKER.—The House will now rise and meet again at 1 P.M. to-morrow.

The House adjourned at Forty-Three Minutes past Five of the Clock to meet again at One of the Clock on Thursday, the 7th September 1961.

WD 6657—GPB—500- (L.A. New)—5-4-67